(ಇಂದು ದಿನಾಂಕಃ **29/07/2026** ರಂದು ಆದೇಶ ದಿನಾಂಕಃ**13/07/2026** ರಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ.ಸಿ.ಪಿ. ವಕೀಲರಿಂದಃ-**

3. ಕನವಳ್ಳಿಯಿಂದ ರಾಣೆಬೆನ್ನೂರಿಗೆ ಹೊರಡುವ ಬಸ್ಸಿನಲ್ಲಿ ಅರ್ಜಿದಾರ ಕರ್ತವ್ಯದ ಮೇಲಿದ್ದ. ಹನುಮಾಪುರ ಮತ್ತು ಯಲ್ಲಾಪುರಗಳ ಹಂತಗಳ ಸಂಖ್ಯೆ ಸರಿಯಾಗಿ ನೆನಪಿಲ್ಲ. ಯಾವ ವ್ಯಕ್ತಿ ಯಾವ ಹಂತದಲ್ಲಿ ಬಸ್ಸನ್ನು ಹತ್ತಿ ಪ್ರಯಾಣಿಸಿ ಯಾವ ಹಂತದಲ್ಲಿ ಇಳಿದರು ಎಂದು ವಿಚಾರಣೆ ಮಾಡಿಲ್ಲ. ಹಣ ಪಡೆದು ಟಿಕೇಟ್ ನೀಡದೇ ಇದ್ದುದರಿಂದ ದಂಡ ವಸೂಲಿ ಮಾಡಿದ್ದು ವಿಚಾರಣೆ ಕಾಲಕ್ಕೆ ಕಂಡುಬಂತು. ಸದರಿ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ದಂಡ ವಸೂಲಿ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಮಾಡಿಲ್ಲ ಎನ್ನುವುದು ನೆನಪಿಲ್ಲ.

4. ಯಾವುದೇ ಪ್ರಯಾಣಿಕ ಟಿಕೇಟ್ ಇಲ್ಲದೇ ಪ್ರಯಾಣಿಸುತ್ತಿರಲಿಲ್ಲ ಎನ್ನುವುದು ಸುಳ್ಳು. ಸುಳ್ಳು ಆರೋಪ ಹೊರಿಸಿ ವಿಚಾರಣೆ ನಡೆಸಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಬಸ್ಸು 4 ನೇ ಹಂತ ತಲುಪುವ ಮುಂಚೆ ಇನ್ಸಪೆಕ್ಟರ ಬಸ್ಸು ಹತ್ತಿದರು ಎನ್ನುವುದು ಸುಳ್ಳು. 4 ನೇ ಹಂತಕ್ಕೆ ಯಲ್ಲಾಪುರ ಬರುತ್ತದೆ. ಯಲ್ಲಾಪುರದಲ್ಲಿಯೇ ಟಿಕೇಟಗಳ ಪರಿಶೀಲನೆ ಮಾಡಲಾಯಿತು. ಯಲ್ಲಾಪುರದಿಂದ ಮುಂಚೆ ಟಿಕೇಟ್ ಪರಿಶೀಲನೆ ಮಾಡಲಾಯಿತು ಎನ್ನುವುದು ಸುಳ್ಳು. ಟಿಕೇಟ ರಹಿತ ಪ್ರಯಾಣಿಕರನ್ನು ವಿಚಾರಣೆ ಕಾಲಕ್ಕೆ ವಿಚಾರಿಸಿಲ್ಲ. ಟಿಕೇಟ್ ಪರಿಶೀಲನೆ ಕಾಲಕ್ಕೆ ಅರ್ಜಿದಾರ ಅಧಿಕಾರಿಗಳಿಗೆ ಅಡೆತಡೆ ಉಂಟುಮಾಡಿದ ಬಗ್ಗೆ ದೂರು ಕೊಟ್ಟಿದ್ದು ಕಂಡುಬಂದಿಲ್ಲ.

**ಮರುವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.